ಈ) ೩೫೭.

ಉ) ೩೦೧೮.

ಕುದುರೆ ಜೂಜಿನ ಬಗ್ಗೆ

೧೩೨೫ ಶ್ರೀ ವೆಂಕಟರಾಮಯ್ಯ (ಮಂಳಬಾಗಿಲು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ನಡೆಯುವ ಕುದುರೆ ಜೂಜಿನಲ್ಲಿ ವರ್ಷವೊಂದರಲ್ಲಿ ಎಷ್ಟು ಜನರು ಪಾಲ್ಗೊಳ್ಳುವರು ?

ಇ) ಸದರಿ ಜೂಜಿನ ಆಟದಿಂದ ವರ್ಷವೊಂದಕ್ಕೆ ಸರ್ಕಾರಕ್ಕೆ ಬರುವ ಲಾಭವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಸುಮಾರು ೧೦ ಲಕ್ಷ.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಇ) ೧೯೮೫–೮೬ನೇ ವರ್ಷದಲ್ಲಿ ೫.೧೫ ಕೋಟಿ ರೂಪಾಯಿ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಸಂದಾಯವಾಗಿದೆ.

ಮುಖ್ಯ ಮಂತ್ರಿಗಳಿಗೆ ತಿಂಗಳಿಗೆ ತಗಲುವ ವೆಚ್ಚದ ಬಗ್ಗೆ

೧೦೪೦ ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಖ್ಯ ಮಂತ್ರಿಯವರಿಗೆ ಮನೆ, ಕಾರು, ಫೋನು, ಸಿಬ್ಬಂದಿ, ಪ್ರಯಾಣ ಹೀಗೆ ಎಲ್ಲಾ ಬಾಬುಗಳಿಗೆ ತಿಂಗಳಿಗೆ ತಗಲುವ ವೆಚ್ಚವೆಷ್ಟು, (೧೯೮೬–೮೭ ತಿಂಗಳುವಾರು ಪ್ರತ್ಯೇಕ ವಿವರ ಒದಗಿಸುವುದು)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮಾನ್ಯ ಮುಖ್ಯಮಂತ್ರಿಯವರು ಸರಕಾರಿ ವಸತಿ ಗೃಹದಲ್ಲಿರುವುದರಿಂದ ಅವರ ಮನೆಯ ಬಗ್ಗೆ ಏನೂ ಸರಕಾರವು ವೆಚ್ಚ ಮಾಡಲಿಲ್ಲ.

ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಅವರ ಸಿಬ್ಬಂದಿಗೆ ವಿವಿಧ ಬಾಬುಗಳಿಗೆ ಏಪ್ರಿಲ್ ೧೯೮೬ ರಿಂದ ಫೆಬ್ರುವರಿ ೧೯೮೭ರ ವರೆಗೆ ಆದ ವೆಚ್ಚದ ವಿವರಗಳು ಇಂತಿವೆ.

	ಕಾರು (ಇಂಧನ)	ವಿದ್ಯುಚ್ಛಕ್ತಿ	ಫೋನು	ಸಿಬ್ಬಂದಿ	(ಪ್ರಯಾಣ ಪ್ರವಾಸ ಭತ್ಯ)
ಏಪ್ರಿಲ್ ೧೯೮೬	೩,೮೬೩–೦೦	—	೧೩,೨೦೩–೦೦	೧,೫೬,೪೧೫–೯೫	—
ಮೇ ೧೯೮೬	೪,೧೪೧–೦೯	೪,೦೪೮–೦೦	೨೨,೮೩೭–೮೦	೧,೬೯,೭೩೪–೭೬	—
ಜೂನ್ ೧೯೮೬	೯,೬೪೦–೮೪	—	೧೫,೫೯೪–೫೦	೫,೪೯,೨೦೪–೦೧	—
ಜುಲೈ ೧೯೮೬	೨,೧೮೩–೪೫	—	೧೨,೭೪೫–೫೦	೧,೭೦,೪೦೯–೪೫	೩,೮೮೩–೮೦
ಆಗಸ್ಟ್ ೧೯೮೬	೩,೭೯೫–೪೦	೬೦೦–೮೦	೪೦,೪೮೫–೪೦	೧,೭೭,೧೮೦–೫೫	೭,೬೪೬–೬೦
ಸೆಪ್ಟೆಂಬರ್ ೧೯೮೬	೫,೨೪೭–೪೯	೧೫೩–೫೦	೩೦,೨೨೫–೩೦	೧,೮೯,೩೯೪–೩೧	೭,೫೭೩–೮೦
ಅಕ್ಟೋಬರ್ ೧೯೮೬	೯,೭೮೭–೭೪	೧೯೧–೩೦	೯,೫೫೦–೦೦	೧,೭೬,೨೦೬–೧೩	೮,೧೧೬–೬೦
ನವೆಂಬರ್ ೧೯೮೬	೮,೬೨೭–೯೫	—	೨೫,೦೪೮–೦೦	೧,೮೭,೮೦೦–೭೪	೧೧,೮೪೫–೯೦
ಡಿಸೆಂಬರ್ ೧೯೮೬	೭,೮೮೨–೨೫	—	೧೫,೯೪೭–೦೦	೧,೭೬,೨೯೭–೫೭	೯,೦೪೦–೪೦
ಜನವರಿ ೧೯೮೭	೮,೫೩೪–೬೦	—	೨೫,೯೭೭–೭೦	೨,೨೩,೨೧೭–೩೭	೧೩೯೪೦–೪೦
ಫೆಬ್ರುವರಿ ೧೯೮೭	೬,೨೮೦–೦೫	—	೮,೫೪೪–೭೦	೧,೭೮,೫೬೦–೫೭	೯,೦೧೧–೬೦